

ಮಂದಿರದಿಂದ ಕಾಣುವ ಬೆಟ್ಟದ ತಪ್ಪಲು

ನಿಮಿಷ ಕೇಳಿ, ಕೊನೆಗೂ ಅದರ ಸಣ್ಣಗಿನ ಝೇಂಕಾರ ಬೆಟ್ಟದ ಮೇಲೆಲ್ಲಾ ಮಾರ್ದನಿಸುತ್ತದೆ. ಪುಟ್ಟ ಕಿಂಡಿಯಂತಿರುವ ಬಾಗಿಲ ಒಳಹೊಕ್ಕರೆ ಅಷ್ಟೊತ್ತಿದ್ದ ಬಿಸಿಲೆಲ್ಲವೂ ಮಾಯವಾಗಿ ಒಳಗಿನ ಕತ್ತಲಲ್ಲಿ ಮೈ ಮನಸ್ಸು ತಣ್ಣಗೆ! ಮಂದಿರದ ವಾಸ್ತುಶಿಲ್ಪ ವಿಶಿಷ್ಟವಾಗಿದೆ. ನುಣುಪಾದ ಶಿಲೆಗಳಿಂದ ಕೆತ್ತಿದ ಪ್ರಾಕಾರ, ಕಲ್ಲು ಮಂಟಪ ಗಮನ ಸೆಳೆಯುತ್ತದೆ. ಒಳಗಿನ ಕಲ್ಲು ಕಂಬಗಳೆಲ್ಲಾ ಕಪ್ಪು ಶಿಲೆಯಿಂದ ಕಂಗೊಳಿಸಿದರೆ, ಹೊರಗಿನ ಕೆಲ ಕಲ್ಲುಗಳು ಕಂದು ಬಣ್ಣದ ನುಣುಪುಗಲ್ಲುಗಳಿಂದ ರಾರಾಜಿಸುತ್ತವೆ.

ಅಂದ ಹಾಗೆ ಶಿವನೇ ಈ ಮಂದಿರದ ಪ್ರಧಾನ ದೇವರಾದ್ದರಿಂದ ಇಲ್ಲಿರುವ ಶಿವಲಿಂಗಕ್ಕೆ ಭಕ್ತಿಯಿಂದ ಪೂಜೆಗೈಯ್ಯಲು ದಿನಂಪ್ರತೀ ನೂರಾರು ಭಕ್ತರು ಬರುತ್ತಾರೆ. ಹಾಗೆಂದು ಇದು ಭಕ್ತಿಪ್ರಧಾನ ತಾಣ ಮಾತ್ರವಲ್ಲ; ಪರಿಸರ ಪ್ರೇಮಿಗಳಿಗೂ, ಇತಿಹಾಸ ಕುತೂಹಲಿಗಳಿಗೂ, ಪಕ್ಷಿ ವೀಕ್ಷಕರಿಗೂ ಇದೊಂದು ಅಚ್ಚುಮೆಚ್ಚಿನ ತಾಣ. ಇಲ್ಲಿರುವ ವಲಸೆ ಹಕ್ಕಿಗಳ ಅಚ್ಚರಿಯ ಲೋಕವೇ ಪಕ್ಷಿಪ್ರಿಯರನ್ನು ಸೆಳೆಯುತ್ತಿದೆ.

ವಿಷ್ಣು, ಲಕ್ಷ್ಮಿ ವಿಗ್ರಹವೂ ಈ ದೇಗುಲದ ಪ್ರಮುಖ ಆಕರ್ಷಣೆ. ಮೂರ್ತಿ, ವಿಗ್ರಹಗಳ ಕೆಲವೊಂದು ಭಾಗಗಳು ಊನಗೊಂಡಿವೆ. ಇಲ್ಲಿನ ಅಪರೂಪದ ಗುಬ್ಬಚ್ಚಿಗಳು, ಹರಳುಚೋರೆ ಹಕ್ಕಿಗಳು, ಕಾಡ ಮೈನಗಳು, ಗೊರವಂಕಗಳೂ ಈ ಶಿವನ ತಾಣದಲ್ಲಿ ಒಂದಾಗಿ ಬದುಕು ಕಟ್ಟಿಕೊಂಡು ಭಕ್ತರು ಹಾಕುವ ಹಣ್ಣುಗಳನ್ನು ತಿನ್ನುತ್ತ, ವಿಸ್ತಾರ ಕೋಟೆಯಂತಿರುವ ಈ ದೇಗುಲದಲ್ಲಿ ಓಡಾಡುತ್ತ ಸುಖವಾಗಿವೆ.

ಇಲ್ಲಿ ಭಕ್ತರು ಬಟ್ಟಲಿನಲ್ಲಿ ಒಂದಿಷ್ಟು ಪೇಡಾಗಳನ್ನು ಮಂದಿರಕ್ಕೆ ಅರ್ಪಿಸುತ್ತಾರೆ. ಅದು ಶಿವನಿಗೆ ಸಮರ್ಪಿತ ಎನ್ನುವುದು ಇವರ ನಂಬಿಕೆ. ನವರಾತ್ರಿ, ಶಿವರಾತ್ರಿಯ ಸಮಯದಲ್ಲಂತೂ ಇಲ್ಲಿನ ಬೆಟ್ಟದ ಮೌನದಲ್ಲಿ ಭಕ್ತಿಯಿಂದ ನಡೆಯುವ ಉತ್ಸವದ ವೈಭವಗಳಿಗೆ ಭಕ್ತರ ಸಾವಿರಾರು ಕಣ್ಣುಗಳು ಅರಳುತ್ತವೆ.



ಭುಲೇಶ್ವರ ಮಂದಿರ ಒಳಭಾಗದಲ್ಲಿರುವ ಶಿಲಾಮೂರ್ತಿಗಳು

ಇಲ್ಲಿನ ಮೌನವನ್ನು ಅನುಭವಿಸಿ, ಕಾಡ ಹಕ್ಕಿನ ಸಂಗೀತವನ್ನು ಕೇಳಿ ಇನ್ನೇನು ಬೆಟ್ಟವಿಳಿದು ಹೊರಟಾಗ, 'ಪ್ರಸಾದ ಸ್ವೀಕರಿಸಿ ಹೋಗಿ' ಎಂದು ಅಲ್ಲೇ ಇದ್ದ ಕೆಲ ಭಕ್ತರು ಕೇಳಿಕೊಂಡರು. ನಮ್ಮನ್ನು ಊಟಕ್ಕೆ ಕೂರಿಸುವಂತೆ ಕೂರಿಸಿ ಬಟ್ಟಲಲ್ಲಿ ಬಿಸಿ ಬಿಸಿ ಪಲಾವ್, ಕೇಸರಿಬಾತು ಬಡಿಸಿದರು. ಬೆಟ್ಟವಿಳಿಯೋವಾಗ ಬಿಮ್ಮನೇ ನಿಂತಿದ್ದ ಆ ಕಲ್ಲಿನ ಸಾಮ್ರಾಜ್ಯವನ್ನು ಬಿಟ್ಟುಬರಲು ಮನಸ್ಸೇ ಒಪ್ಪುತ್ತಲೇ ಇರಲಿಲ್ಲ.